# ನವಿಲುಗನ್ನಡಿ

- ಜುಲೈ ಸಂಚಿಕೆಯ ‘ಮಾತುಕತೆ’(ಬೆಂಕಿ ಮತ್ತು ಬೆಳಕಿನ ಅನಂತ ಲೀಲೆಯಾಗಿ ಸಾಹಿತ್ಯ)ಯಲ್ಲಿ ಕತೆಗಾರ ಶ್ರೀಧರ ಬಳಗಾರ ಅವರಿಂದ ನೇರ ಹಾಗೂ ಪ್ರಖರ ಮಾತುಗಳು ಮೂಡಿಬಂದಿವೆ. ಕತೆಗಾರನ ಮನದಲ್ಲಿ ನಡೆಯುವ ಸೃಷ್ಟಿಕ್ರಿಯೆಯ ತಾಕಲಾಟಗಳನ್ನು ವಿಮರ್ಶಕ ಎಂ.ಜಿ. ಹೆಗಡೆ ಅವರು ಮಾಡಿದ ಈ ಸಂದರ್ಶನ ಪರಿಣಾಮಕಾರಿಯಾಗಿ ಹಿಡಿದಿಟ್ಟಿದೆ.

  **ಭಾಗ್ಯಾ ಅರವಿಂದ, ಬಾಗಲಕೋಟೆ**

- ಶರತ್ ಕಲ್ಕೋಡ್ ಅವರು ‘ತಲೆ ತಲಾಂತರ’ ಪ್ರಬಂಧದಲ್ಲಿ ಕ್ಷೌರದ ನೆಪದಲ್ಲಿ ತಲೆಮಾರುಗಳ ಸ್ಥಿತ್ಯಂತರಗಳನ್ನು ಸೊಗಸಾಗಿ ಕಟ್ಟಿ ಕೊಟ್ಟಿದ್ದಾರೆ.


  **ವಿಶ್ವಾಸ ಕುಲಕರ್ಣಿ, ಹುಬ್ಬಳ್ಳಿ**

- ಗುರುಪ್ರಸಾದ್ ಕಂಟಲಗೆರೆ ಅವರ ಕತೆ ‘ಇವ ನಮ್ಮವ’ ಅತ್ಯಂತ ಸರಳ ಹಾಗೂ ಆಪ್ತ ನಿರೂಪಣೆಯಿಂದಾಗಿ ಕಣ್ಣಮುಂದೆಯೇ ನಡೆಯುತ್ತಿದೆಯೇನೋ ಎನ್ನುವಂತೆ ಭಾಸವಾಯಿತು. ಕತೆ ಕೊನೆಯಾಗುತ್ತಿದ್ದಂತೆ ತೀವ್ರ ನಿರಾಶೆ, ಆಕ್ರೋಶ, ಅನುಕಂಪ ಅಥವಾ ಇದ್ಯಾವುದೂ ಅಲ್ಲದ ಪಾಪಪ್ರಜ್ಞೆಯೋ, ಸಾಕ್ಷಿಪ್ರಜ್ಞೆಯೋ, ಇಲ್ಲವೆ ಸಾಮಾಜಿಕ ವ್ಯವಸ್ಥೆಯ ವಿರುದ್ಧದ ಸಾತ್ವಿಕ ಸಿಟ್ಟೋ – ಹೀಗೆ ಹೇಳಲಾಗದ ಅನೇಕ ಭಾವನೆಗಳು ಮೂಡಿದವು.

  **ಮೋಹನ್ ಮಿರ್ಲೆ, ಹುಳಿಯಾರು**

- ಬಾನು ಮುಷ್ತಾಕ್ ಅವರ ಕತೆ ‘ಹೇಳಿ ಹೋಗು’ ಮನಮುಟ್ಟಿತು. ಕತೆಯ ಕೊನೆಯಲ್ಲಿ ‘ಹೇಳಿ ಹೋಗು ಕಾರಣವ ಹೋಗುವ ಮುಂಚೆ’ ಎಂದು ತಾಯಿ ಹೇಳುವ ಮಾತು ಮನಕ್ಕೆ ನಾಟಿತು.

  **ಸತ್ಯಬೋಧ, ಬೆಂಗಳೂರು**




- ಸದಾನಂದ ಆರ್. ಅವರ ‘ಲಾಠಿ’ ಕತೆ ಇಂಗ್ಲಿಷ್ ಭಾಷಾ ಪರಿಣತ ಪೊಲೀಸ್ ಪೇದೆಯ ಫಜೀತಿಗಳನ್ನು ತಿಳಿಹಾಸ್ಯದಲ್ಲಿ ಚಿತ್ರಿಸಿದೆ. ನೀಳ್ಗತೆ ‘ಹೇಳಿ ಹೋಗು’ ಕಣ್ಣಲ್ಲಿ ನೀರು ತರಿಸಿತು.

  **ಗೀತಾ ಸುನೀಲ್, ಬೆಳಗಾವಿ**

- ಗೀತಾ ವಸಂತ ಅವರ ‘ಬಿಡುಗಡೆ’ ಕವಿತೆ ಕೊರೊನಾ ವೈರಸ್ ಮನುಷ್ಯನ ನಂಬಿಕೆ, ಜಗತ್ತಿನ ವಾದ, ತರ್ಕಗಳನ್ನು ತಲೆಕೆಳಗೆ ಮಾಡಿ ಬಯಲಿಗೆ ತಂದು ನಿಲ್ಲಿಸಿದ್ದನ್ನು ಅರ್ಥಪೂರ್ಣವಾಗಿ ಚಿತ್ರಿಸಿದೆ.

  **ಎಂ.ಎಸ್. ರಮೇಶ್, ಪಡೀಲು**

- ‘ನಿಸಾರ್: ಎದೆಯಂಗಳದ ಗಂಧದ ಮರ’ (ಬಾಹುಬಲಿ ಸ್ವಾಮಿ ಎನ್.) ನೆನಪಿನ ಲೇಖನ ಚೆನ್ನಾಗಿದೆ. ಲೇಖಕರು ಕವಿ ಕೆ.ಎಸ್. ನಿಸಾರ್ ಅಹಮದ್ ಜೊತೆಗಿನ ತಮ್ಮ ಒಡನಾಟವನ್ನು ಆಪ್ತವಾಗಿ ತಮ್ಮ ಬರಹದಲ್ಲಿ ಹಂಚಿಕೊಂಡಿದ್ದಾರೆ.

  **ನಾರಾಯಣ ಯಾಜಿ ಶಿರಾಲಿ,**
  **ಚಂದ್ರಮೌಳಿ, ಬೆಂಗಳೂರು**